ಕೊಡುಗೆ : ಊ. ಮಾ. ರಾಮಚಂದ್ರ

ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ.

ಲೇಖನ-ಸುದ್ದಿ ಕಳುಹಿಸುವ ಮೂಲಕ ನೋವುಳ್ಳವರ ನುಡಿಯಾಗಿರುವ ಪಂಚಮವನ್ನು ನಿಮ್ಮ ದನಿಯನ್ನಾಗಿಸಿಕೊಳ್ಳಿ.

ಸಂಪುಟ : 5, ಸಂಚಿಕೆ : 3, 5, ಮಾರ್ಚ್ 1981 ಪಾಕ್ಷಿಕ ಬೆಲೆ : 20 ಪೈಸೆ

ವಾರ್ಷಿಕ ಚಂದಾ 5 ರೂ.ಗಳು

ಗುಜರಾತ್ : ೧೩ ಮಂದಿ ದಲಿತರ ಹತ್ಯೆ

ಗುಜರಾತಿನಲ್ಲಿ ಈಗ ಅಸ್ಪೃಶ್ಯರ ಮತ್ತು ಇತರ ಕೇಜಾತಿಗಳಿಗೆ ನೀಡಲಾಗುತ್ತಿರುವ ಮೀಸಲಾತಿ ವಿರುದ್ಧ ನಡೆಯುತ್ತಿರುವ ಪ್ರತಿಗಾಮಿ ಚಳವಳಿಯು ಈವರೆಗೆ 13 ಮಂದಿ ದಲಿತರನ್ನು ಬಲಿ ತೆಗೆದುಕೊಂಡಿದೆ.

ಮೀಸಲು ಸ್ಥಾನವನ್ನು ವಿರೋಧಿಸಿ ವೈದ್ಯ ವಿದ್ಯಾರ್ಥಿಗಳು ಆರಂಭಿಸಿದ ಚಳವಳಿ ಈಗ ಹಳ್ಳಿಗಳಿಗೆ ಹಬ್ಬಿ ದಿನಬೆಳಗಾದರೆ ದಲಿತರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ದಲಿತರ ಮನೆಗಳ ಲೂಟಿ, ಹೆಂಗಸರ ಅತ್ಯಾಚಾರ ಮತ್ತು ಮನೆಗಳಿಗೆ ಬೆಂಕಿ ಹಚ್ಚಲಾಗುತ್ತಿದೆ. ಅಲ್ಲಿನ ದಲಿತರಿಗೆ ಬದುಕೇ ಇಲ್ಲ.

1975ರಲ್ಲಿ ಸ್ನಾತಕೋತ್ತರ ವೈದ್ಯಕೀಯ ತರಗತಿಗಳಲ್ಲಿ ಶೇ. 25ರಷ್ಟು ಮೀಸಲಾತಿ ಜಾರಿಗೆ ತಂದದ್ದೇ ದಲಿತರ ಮೇಲಿನ ದ್ವೇಷಕ್ಕೆ ಕಾರಣವಾಯಿತು. ಈ ಮೀಸಲಾತಿ ಪ್ರಕಾರ ಪರಿಶಿಷ್ಟ ವರ್ಗಗಳಿಗೆ ಶೇ. 7, ಪರಿಶಿಷ್ಟ ಬುಡಕಟ್ಟುಗಳಿಗೆ ಶೇ. 13 ಮತ್ತು ಉಳಿದ ಶೇ. 5 ಸ್ಥಾನಗಳನ್ನೂ ಇತರ ಹಿಂದುಳಿದ ವರ್ಗಗಳಿಗೆ ನೀಡಲಾಯಿತು. ಈ ವರ್ಗಗಳಿಗೆ ಶೇ. 25ರಷ್ಟು ಸ್ಥಾನಗಳನ್ನು ಸರ್ಕಾರ ಮೀಸಲಿಟ್ಟಿತಾದರೂ ಅಷ್ಟು ಸ್ಥಾನಗಳು ಭರ್ತಿಯಾಗಲಿಲ್ಲ. ವೈದ್ಯಕೀಯ ಶಿಕ್ಷಣಕ್ಕೆ ಸೇರಬಯಸುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳೂ ಸಹ ಕನಿಷ್ಟ ಶೇ. 50 ರಷ್ಟು ಅಂಕವನ್ನು ತೆಗೆದಿರಬೇಕಾಗಿದ್ದರಿಂದ ಮತ್ತು ವೈದ್ಯಕೀಯ ಶಿಕ್ಷಣ ವೆಚ್ಚವನ್ನು ಬರಿಸುವಂತಹ ಆರ್ಥಿಕ ಶಕ್ತಿ ಇಲ್ಲದ ಕಾರಣ ಶೇ.25 ಸ್ಥಾನಗಳು ಭರ್ತಿಯಾಗಲಿಲ್ಲ. ಪರಿಶಿಷ್ಟ ವರ್ಗದ ವಿದ್ಯಾರ್ಥಿಯಿಂದಲೂ ಹೆಚ್ಚು ಅಂಕವನ್ನು ನಿರೀಕ್ಷಿಸಿದ್ದರಿಂದ ಇಲ್ಲಿ ಪ್ರತಿಭೆಗೆ ಅಥವಾ ಅರ್ಹತೆಗೆ ಮಾನ್ಯತೆ ಇಲ್ಲ ಎಂಬ ವಾದ ಸುಳ್ಳಾಯಿತು. ಆದರೂ ಇನ್ನು ಕೆಲವು ವರ್ಷಗಳಲ್ಲಿ ಶೇ. 80 ರಷ್ಟು ಸ್ಥಾನಗಳು ದಲಿತರ ಪಾಲಾಗುವುದೆಂಬ ಸುಳ್ಳು ಪ್ರಚಾರ ಹಬ್ಬಿಸಿ ಮೀಸಲಾತಿ ವಿರುದ್ಧ ವಿದ್ಯಾರ್ಥಿಗಳನ್ನು ಎತ್ತಿಕಟ್ಟುವ ಯತ್ನ ನಡೆಯತೊಡಗಿತು.

ವಾಸ್ತವ ಸಂಗತಿಯೆಂದರೆ ಗುಜರಾತ್‌ನ ಒಟ್ಟು ಐದು ಸರ್ಕಾರಿ ವೈದ್ಯ ಕಾಲೇಜಿನ ಕಳೆದ 5 ವರ್ಷಗಳಲ್ಲಿನ ಒಟ್ಟು 837 ಸೀಟುಗಳಲ್ಲಿ ಶೇ. 25 ಮೀಸಲು ಪ್ರಕಾರ 110 ಸೀಟುಗಳು ದಲಿತ ವಿದ್ಯಾರ್ಥಿಗಳಿಗೆ ದಕ್ಕಬೇಕಾಗಿತ್ತು. ಆದರೆ ಈವರೆಗೆ ಅವರಿಗೆ 37 ಸೀಟುಗಳನ್ನು ಮಾತ್ರ ನೀಡಲಾಗಿದೆ.

ವೈದ್ಯಕೀಯ ಕಾಲೇಜುಗಳ ಹುದ್ದೆಗಳಲ್ಲೂ ಕೂಡ ಪರಿಶಿಷ್ಟ ವರ್ಗಗಳಿಗೆ ವಂಚನೆ ಮಾಡಲಾಗಿದೆ. 737 ಹುದ್ದೆಗಳಿರುವ ಪ್ರೊಫೆಸರುಗಳು, ಅಸೋಸಿಯೇಟ್ ಪ್ರೊಫೆಸರುಗಳು, ಅಸಿಸ್ಟೆಂಟ್ ಪ್ರೊಫೆಸರುಗಳು ಮತ್ತು ಟ್ಯೂಟರ್‌ಗಳಲ್ಲಿ 22 ಹುದ್ದೆಗಳು ಪರಿಶಿಷ್ಟ ಜಾತಿಗೂ ಮತ್ತು 2 ಹುದ್ದೆ ಪರಿಶಿಷ್ಟ ಬುಡಕಟ್ಟಿಗೂ ಸಿಕ್ಕಿವೆ. 106 ಮಂದಿ ಪ್ರೊಫೆಸರುಗಳಲ್ಲಿ ಪರಿಶಿಷ್ಟ ವರ್ಗದ ಅಭ್ಯರ್ಥಿಯು ಒಬ್ಬರಿದ್ದು, ಬುಡಕಟ್ಟಿನವರು ಇಲ್ಲವೇ ಇಲ್ಲ.

(ಕಡೇ ಪುಟ ನೋಡಿ)

ಗುಜರಾತ್ ದಲಿತರ ಪ್ರತಿ ಚಳವಳಿಗೆ ಡಿಯಸೆಸ್ ಬೆಂಬಲ

ಗುಜರಾತಿನಲ್ಲಿ ನಡೆಯುತ್ತಿರುವ ಮೀಸಲಾತಿ ವಿರೋಧಿ ಚಳುವಳಿಯನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಖಂಡಿಸಿ, ದಲಿತರ ಹೋರಾಟಕ್ಕೆ ತನ್ನ ಬೆಂಬಲ ಸೂಚಿಸಿದೆ.

ಶತಶತಮಾನಗಳಿಂದ ತುಳಿತಕ್ಕೊಳಪಟ್ಟವರ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಒಂದಿಷ್ಟು ವಿಶೇಷ ಸವಲತ್ತುಗಳನ್ನು ನೀಡುವ ಕಾರ್ಯಕ್ರಮವನ್ನು ವಿರೋಧಿಸುತ್ತಿರುವುದು ಅತ್ಯಂತ ಅಮಾನವೀಯ ಕ್ರಮ. ಮೀಸಲಾತಿಯನ್ನು ಆರ್ಥಿಕ ಅನುಕೂಲ ಕಾರಣಕ್ಕಲ್ಲದೆ ಸಾಮಾಜಿಕ ದೃಷ್ಟಿಕೋನದಿಂದ ನೋಡಬೇಕಾಗಿದೆ. ಅಂದರೆ– ಅಸ್ಪೃಶ್ಯರು ಸಾರ್ವಜನಿಕ ಒಡನಾಟದ ಸ್ಥಳಗಳಲ್ಲಿ ಕೆಲಸದಲ್ಲಿದ್ದರೆ ಮಾತ್ರವೇ ಇತರ ಜನಾಂಗಗಳೊಡನೆ ಬೆರೆಯಲು ಸಾಧ್ಯವಾಗಿ ಜಾತೀಯತೆ ಸಡಿಲವಾಗುತ್ತದೆ. ಆದ್ದರಿಂದ ಸದ್ಯಕ್ಕೆ ಮೀಸಲಾತಿ ಅನಿವಾರ್ಯ.

ಈ ಸಾಮಾಜಿಕ ಸತ್ಯವನ್ನು ಎಲ್ಲರಿಗೂ ಮನಗಾಣಿಸುವುದಕ್ಕಾಗಿ ಏಪ್ರಿಲ್ 14ರಂದು ಮೀಸಲಾತಿ ಕುರಿತು ವಿಚಾರ ಸಂಕಿರಣ ಏರ್ಪಡಿಸಲು ಸಂಘರ್ಷ ಸಮಿತಿ ನಿರ್ಧರಿಸಿದೆ. ಈ ವಿಚಾರ ಸಂಕಿರಣಕ್ಕೆ ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶರಾದ ವಿ. ಆರ್. ಕೃಷ್ಣಅಯ್ಯರ್ ಮತ್ತು ಖ್ಯಾತ ಪತ್ರಕರ್ತ ಕುಲದೀಪ್ ನಯ್ಯಾರ್ ಮುಂತಾದ ಗಣ್ಯರನ್ನು ಕರೆಸುವ ಉದ್ದೇಶಹೊಂದಲಾಗಿದೆ.

ಈ ಉದ್ದೇಶಿತ ವಿಚಾರ ಸಂಕಿರಣದಿಂದ ಹೊರಹೊಮ್ಮುವ ಅಭಿಪ್ರಾಯವು ಮೀಸಲಾತಿ ಬಗೆಗೆ ದೇಶದಲ್ಲೀಗ ಎದ್ದಿರುವ ವಿರೋಧಾಭಾಸವನ್ನು ಕಡಿಮೆಮಾಡುವುದೆಂಬ ಆಶಯ ಇದೆ.

ಪ್ರಸಕ್ತ ವಿದ್ಯಾರ್ಥಿ ಚಳುವಳಿ : ಒಂದು ನೋಟ

ವಿದ್ಯಾರ್ಥಿ ಕ್ಷೇತ್ರದಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸುವುದಾದರೆ ವಿದ್ಯಾರ್ಥಿಗಳು ಸಮಾಜದ ಆಗುಹೋಗುಗಳಿಗೆ ಪ್ರತಿಸ್ಪಂದಿಸುವ ಮನೋಭಾವವನ್ನೇ ಬೆಳಸಿಕೊಂಡಂತಿಲ್ಲ. ಇಂದಿನ ವಿದ್ಯಾರ್ಥಿಗಳು ಮುಂದಿನ ದೇಶವನ್ನು ಕಟ್ಟುವ ಶಿಲ್ಪಿಗಳು ಎಂದೆಲ್ಲಾ ಹೇಳಿದ್ದರು ಈಗಿನ ವಿದ್ಯಾರ್ಥಿಗಳಲ್ಲಿ ಅಂತಹ ಯಾವುದೇ ಚಿಹ್ನೆಗಳು ಕಾಣುತ್ತಿಲ್ಲ. ಈ ಸಂದರ್ಭದಲ್ಲಿ ದಶಕದ ವಿದ್ಯಾರ್ಥಿ ಹೋರಾಟವನ್ನು ಜ್ಞಾಪಿಸಿಕೊಳ್ಳಬೇಕಾಗುತ್ತದೆ.

ಕರ್ನಾಟಕದ ವಿದ್ಯಾರ್ಥಿಗಳ ಹೋರಾಟವಲ್ಲಿ ಬೂಸಗಲಾಟೆ ಬಹು ಪ್ರಸಿದ್ಧವಾದದ್ದು. ಆಗಿನ ಮಂತ್ರಿಗಳೂ ಮಾಜಿ ಕ್ರಾಂತಿಕಾರಿಗಳೂ ಆದ ಬಿ. ಬಸವಲಿಂಗಪ್ಪನವರು ಕನ್ನಡದಲ್ಲಿನ ಬಹುತೇಕ ಸಾಹಿತ್ಯ "ಬೂಸ ಸಾಹಿತ್ಯ"ವೆಂಬ ಸತ್ಯವನ್ನು ನುಡಿದಿದ್ದರು. ಸಾಹಿತ್ಯ ಕ್ಷೇತ್ರದ ರಾಜಕಾರಿಣಿಗಳು, ಪರಿಜನ ವಿರೋಧಿಗಳು ಈ ಸಂದರ್ಭವನ್ನು ಉಪಯೋಗಿಸಿಕೊಂಡು ವ್ಯಾಪಕವಾಗಿ ಚಳುವಳಿಯನ್ನು ಹೂಡಿದ್ದರು. ಆದರೆ ಇದಕ್ಕೆ ಬಲಿಪಶುಗಳಾದವರು ವಿದ್ಯಾರ್ಥಿಗಳು. ವಿದ್ಯಾರ್ಥಿ ಚಳುವಳಿಯನ್ನು ಇಂಥ ಕೊಳಕು ರಾಜಕೀಯಕ್ಕೆ ಉಪಯೋಗಿಸಿಕೊಂಡು ಬಸವಲಿಂಗಪ್ಪನವರನ್ನು ಮಂತ್ರಿಪದವಿಯಿಂದ ಕೆಳಗಿಳಿಸುವುದರಲ್ಲಿ ಕೆಲವು ಸಮಯಸಾಧಕರು ಯಶಸ್ವಿಯಾದರು.

ಮತ್ತೊಂದು ಸಮಯದಲ್ಲಿ ವಿದ್ಯಾರ್ಥಿಗಳು ಚಳುವಳಿ ಹೂಡಿದ್ದೆಂದರೆ ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಮತ್ತು ಜ್ಞಾನಭಾರತಿಯ ಜನಕರಾದ ಡಾ॥ ಎಚ್. ನರಸಿಂಹಯ್ಯನವರು ನಮ್ಮ ಸಮಾಜದ ಕೊಳಕಿಗೆ ಕಳಸವಿಟ್ಟಂತ್ತಿರುವ ಮೂಢನಂಬಿಕೆಯ ವಿರುದ್ಧ ಸಮರ ಹೂಡಿದರು. ಈ ಹೋರಾಟದಲ್ಲಿ ಸಾರ್ವಜನಿಕವಾಗಿ ಜನಗಳನ್ನು ಮೋಸ ಮಾಡಲು ಯತ್ನಿಸುತ್ತಿರುವ ಸಾಯಿಬಾಬನ ನಟ್ಟಂಗಿತನವನ್ನು ಬಯಲುಮಾಡಲು ಹೊರಟಿದ್ದರು. ಆದರೆ ಈ ಹೋರಾಟವು ನರಸಿಂಹಯ್ಯನವರ ರಾಜೀನಾಮೆಯಲ್ಲಿ ಪರ್ಯವಸಾನಕೊಂಡಿತು. ಇದು ಕೆಲವು ಕುತಂತ್ರಿಗಳ ತಂತ್ರದಿಂದ ನಡೆಯಿತೆಂಬ ಮಾತು ಈಗಲೂ ಇದೆ. ಈ ಸಂದರ್ಭದಲ್ಲಿ ಕೂಡ ವಿದ್ಯಾರ್ಥಿ ಚಳುವಳಿಯನ್ನು ಉಪಯೋಗಿಸಿಕೊಂಡ ಜಾತಿವಾದಿಗಳು ಯಶಸ್ವಿಯಾಗಿದ್ದಾರೆ.

ವಿಶ್ವವಿದ್ಯಾಲಯದ ಪ್ರಗತಿಪರ ಶಕ್ತಿಗಳು ಕೂಡ ಆಗ ಮೌನವಾಗಿದ್ದು, ತಪ್ಪುಮಾಡಿವೆ. ವಿದ್ಯಾರ್ಥಿಗಳೂ ಕೂಡ ಆ ವೇಳೆಯಲ್ಲಿ ಡಾ॥ ನರಸಿಂಹಯ್ಯನವರಿಗೆ ಬೆಂಬಲ ಸೂಚಿಸದೆ ಇದ್ದುದು ವಿದ್ಯಾಕ್ಷೇತ್ರಕ್ಕೆ ಬಹುದೊಡ್ಡ ಪೆಟ್ಟುಬಿದ್ದಂತಾಗಿದೆ ಇಲ್ಲಿ ವಿದ್ಯಾರ್ಥಿಗಳ ಆಲೋಚನೆ ಕೆಲಸ ಮಾಡದೆ ಮೂಕವಾಗಿ ಹೋಯಿತು.

ವಿದ್ಯಾರ್ಥಿ ಸಮುದಾಯದ ಇತಿಹಾಸವನ್ನು ಅವಲೋಕಿಸಿದರೆ ತಿಳಿಯುವ ಅಂಶ ವಿದ್ಯಾರ್ಥಿ ಶಕ್ತಿ ಸ್ವಾತಂತ್ರ್ಯ ಸಂಗ್ರಾಮದಿಂದ ಇಂದಿನವರೆಗೆ ಸಕ್ರಿಯವಾಗೇ ಕೆಲಸಮಾಡುತ್ತಾ ಬಂದಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಗಾಂಧಿಯಂಥವರೂ ಕೂಡ ವಿದ್ಯಾರ್ಥಿಗಳೇ, ಶಾಲಾಕಾಲೇಜುಗಳನ್ನು ತೊರೆದು ಹೊರಬನ್ನಿ. ಬ್ರಿಟೀಷರನ್ನು ಹೊರಗೋಡಿಸಿ' ಎಂಬ ಘೋಷಣೆಗಳನ್ನು ಕೊಟ್ಟಿದ್ದರು. ಎರಡನೆಯ ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯಲ್ಪಟ್ಟಿರುವ ಜಯಪ್ರಕಾಶನಾರಾಯಣರ ಸಮಗ್ರ ಕ್ರಾಂತಿಯ ಛಾತ್ರಯುವ ಸಂಘರ್ಷ ವಾಹಿನಿಯು ಬಿಹಾರ ಮುಂತಾದ ರಾಜ್ಯಗಳಲ್ಲಿ ಕೊಟ್ಟಕರೆಗೆ ವಿದ್ಯಾರ್ಥಿಗಳ ಸಕ್ರಿಯ ಪಾತ್ರವಹಿಸಿದ್ದರಿಂದ ಜೆ. ಪಿ. ಚಳುವಳಿ ತೀವ್ರ ಸ್ವರೂಪವನ್ನು ಮುಟ್ಟುವುದರಲ್ಲಿ ಯಶಸ್ವಿಯಾಯಿತು.

ಆದರೆ ಈಗ ಎರಡು ಭಾರಿ ಸ್ವಾತಂತ್ರ್ಯ ಬಂದರೂ ಈ ದೇಶದ 60 ಕೋಟಿ ಜನರು ಸ್ವಾತಂತ್ರ್ಯದ ವಾಸನೆಯನ್ನು ಕೂಡ ಕಾಣದಾಗಿದ್ದಾರೆ. ಆದ್ದರಿಂದ ಎರಡನೇ ಬಾರಿ ಬಂದ ಸ್ವಾತಂತ್ರ್ಯ ಅತಂತ್ರವಾಗಿ ನಿಸಂತ್ರವಾಗುವ ಕಾಲ ಈಗ ಒದಗಿರುವುದರಿಂದ ವಿದ್ಯಾರ್ಥಿಗಳ ಮೇಲೆ ಮಹತ್ತರ ಜವಾಬ್ದಾರಿಯಿದೆಯೆಂಬುದನ್ನು ಅರಿತುಕೊಳ್ಳಬೇಕಾಗಿದೆ. ಅಲ್ಲದೆ ವಿದ್ಯಾರ್ಥಿಗಳು ಇಂದು ಪ್ರಜ್ಞಾವಂತ ರಾಜಕಾರಣಕ್ಕೆ, ರಾಜಕಾರಣಿಗಳಿಗೆ ತಮ್ಮ ಮಿತಿಯಲ್ಲೇ ಬೆಂಬಲ ಸೂಚಿಸುವುದು ಅವಶ್ಯಕವಾಗಿದೆ.

ಅಂದಿನಿಂದ ಇಂದಿನವರೆಗೂ ಇಷ್ಟರಮಟ್ಟಿಗೆ ವಿದ್ಯಾರ್ಥಿಗಳು ರಾಜಕೀಯವಾಗಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರೂ ಕೆಲವು ತಿಳಿಗೇಡಿ ರಾಜಕಾರಣಿಗಳು ವಿದ್ಯಾರ್ಥಿಗಳು ರಾಜಕೀಯವನ್ನು ಪ್ರವೇಶಿಸಬಾರದೆಂದು ಕಿವಿಮಾತು ಹೇಳುತ್ತಾ ಬಂದಿದ್ದಾರೆ. ಕೆಲವು ಬುದ್ಧಿಜೀವಿಗಳು ಡಾ॥ ಬಿ. ಆರ್. ಅಂಬೇಡ್ಕರ್‌ರವರು ಹೇಳಿದ "ಮೊದಲು ಅಭ್ಯಾಸ ಅನಂತರ ರಾಜಕೀಯ" ಈ ಮಾತನ್ನು ಉದಾಹರಿಸಿ ವಿದ್ಯಾರ್ಥಿಗಳ ಹೋರಾಟದ ಹಾದಿಗೇ ಅಡ್ಡನಿಲ್ಲುವ ಕುತಂತ್ರ ನಡೆಸುತ್ತಿರುತ್ತಾರೆ. ಅಂಬೇಡ್ಕರರ ಮಾತಿನ ನಿಜವಾದ ಅರ್ಥವಾದರೂ, ವಿದ್ಯೆಯೆಂದರೆ- ಸಮಾಜದ ಹುಟ್ಟು ಬೆಳವಣಿಗೆಯನ್ನು ಕ್ರಮಬದ್ಧವಾಗಿ ಅಭ್ಯಸಿಸುವುದು ಮೂಢನಂಬಿಕೆ ಅವೈಜ್ಞಾನಿಕ ಅವೈಚಾರಿಕ ವಿಚಾರಗಳನ್ನೂ ಮೂಲಭೂತವಾಗಿ ವಿರೋಧಿಸುವಂತಹ ಜಾಗೃತಿಯನ್ನು ಬೆಳೆಸಿಕೊಳ್ಳುವುದು ವಿದ್ಯಾರ್ಥಿಗಳ ಕರ್ತವ್ಯವೆಂದೇ ತಿಳಿದಿದ್ದರು

ಆದ್ದರಿಂದ ವಿದ್ಯಾರ್ಥಿಗಳು ಸಮಾಜದ ನಾಡಿಬಡಿತಕ್ಕೆ, ಆಗುಹೋಗುಗಳಿಗೆ ಸಕ್ರಿಯವಾಗಿ ಪ್ರತಿಸ್ಪಂಧಿಸುವುದು ಕರ್ತವ್ಯವೆಂದು ಈಗಲಾದರೂ ಮನಗಾಣಬೇಕು. ಈ ರೀತಿ ಸರಿಯಾದ ತಿಳುವಳಿಕೆ ನೀಡದ ಈ ಸಮಾಜವನ್ನು ಹೊಗಳುತ್ತಾ ಅವರ ಪೋಷಕರಾಗಿ ಬಂದಿರುವ ಈ ದೇಶದ ಬುದ್ಧಿಜೀವಿಗಳು ದ್ರೋಹವೆಸಗಿದ್ದಾರೆ. ಹೀಗಿದ್ದರೂ ವಿದ್ಯಾರ್ಥಿಗಳನ್ನು ಕುತಂತ್ರದ ರಾಜಕೀಯಕ್ಕೆ ಬಳಸಿಕೊಂಡು, ಸಮಯಸಾಧಕತನ ನಡೆಸಿದ್ದಕ್ಕೆ ಚರಿತ್ರೆ ಸಾಕ್ಷಿ ನೀಡುತ್ತಿದೆ.

ಯಾವ ಸಮಾಜದಲ್ಲಿ ಜನ ತಮ್ಮ ಅರಿವನ್ನೂ, ಶೋಷಣೆಯನ್ನೂ ಅರಿಯದೆ ಬದುಕಿದ್ದಾರೋ ಅವರಿಗೆ ತಿಳುವಳಿಕೆ ನೀಡುವುದು ವಿದ್ಯಾವಂತರಾದ ನಮ್ಮ ಕರ್ತವ್ಯ. ಯಾವ ಸಮಾಜದಲ್ಲಿ ಕಂಡಕಂಡ ಕಲ್ಲಿಗೆ ಪೂಜೆಮಾಡುತ್ತಾ, ಕಾಗೆ, ನಾಯಿ, ಇಲಿಗಳನ್ನು ಪೂಜೆಮಾಡುತ್ತಿದ್ದು, ಮನುಷ್ಯನನ್ನು ಮಾತ್ರ ಹಾವಿನ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಾರೋ ಅಂತಹ ವ್ಯವಸ್ಥೆಯ ವಿರುದ್ಧ ಸಿಡಿದೇಳುವುದು ಅವರ ಕರ್ತವ್ಯ.

...ಲ್ಲಿಯವರೆಗೆ ಈ ದೇಶದಲ್ಲಿ ಜಾತಿ ಉಸಿರಾಡು...ತ್ತಿರುತ್ತದೆಯೋ ಅಲ್ಲಿಯವರೆಗೂ ವಿದ್ಯಾಕ್ಷೇತ್ರದ ಜಾತಿಯತೆ ಕೂಡ ಹೋಗಲಾರದು. ಮತ್ತು ವಿದ್ಯಾಕೇಂದ್ರಗಳು ಜಾತಿವಾದಿ ಸಂಸ್ಥೆಗಳನ್ನು ಬಿಟ್ಟು ಹೊರಬರುವುದಿಲ್ಲವೋ ಅಲ್ಲಿಯವರೆಗೆ ವಿದ್ಯಾಭ್ಯಾಸ ಮುಕ್ತ ವಿದ್ಯಾಭ್ಯಾಸವಾಗಲಾರದು. ಭಾರತ ಜಾತ್ಯಾತೀತ ರಾಷ್ಟ್ರವಾಗದು.

ಈ ರೀತಿಯ ಅವಲೋಕನದಿಂದ 1974-75ರ ವಿದ್ಯಾರ್ಥಿ ಚಳುವಳಿಯನ್ನು ಇಂದಿನ ವಿದ್ಯಾರ್ಥಿ ಮನೋಧರ್ಮವನ್ನು ಸೂಕ್ಷ್ಮವಾಗಿ ನೋಡಿದವರಿಗೆ ತಿಳಿಯುವ ಮುಖ್ಯ ಸಂಗತಿ ವಿದ್ಯಾರ್ಥಿಗಳು ರಾಜಕೀಯವಾಗಿ ಸಾಕಷ್ಟು ತಿಳುವಳಿಕೆ ಪಡೆಯಬೇಕು. 1974ರಲ್ಲಿ ಹಾಸನದಲ್ಲಿ ಗೋಲಿಬಾರ್‌ನಿಂದ ಒಬ್ಬ ವಿದ್ಯಾರ್ಥಿ ಸತ್ತದ್ದಕ್ಕೆ ಇಡೀ ಕರ್ನಾಟಕದ ವಿದ್ಯಾರ್ಥಿ ಸಮುದಾಯ ಒಕ್ಕೊರನಿಂದ ವಿರೋಧಿಸಿತ್ತು. ಆದರೆ ಈಗ ಕಂಡಕಂಡಲ್ಲಿ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಲಾಠಿಚಾರ್ಜು ಮಾಡುತ್ತಿರುವ ಪೋಲೀಸರನ್ನು, ಅದನ್ನು ಬೆಂಬಲಿಸುತ್ತಿರುವ ಸರ್ಕಾರವನ್ನು ತೀವ್ರವಾಗಿ ಎದುರಿಸಬೇಕಾಗಿದೆ. ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಪರಿಸ್ಥಿತಿ ಏನಾದೀತೆಂದು ಯಾವೊಬ್ಬ ಸೂಕ್ಷ್ಮ ಪ್ರಜ್ಞೆಯುಳ್ಳವ ಅರಿತು ಈ ಕಾರ್ಯಕ್ಕೆ ಬೆಂಬಲ ನೀಡುತ್ತಿರಲಿಲ್ಲ. ಇಲ್ಲಿ ಆ ಕಾರ್ಯ ನಡೆಯುತ್ತಿದೆ. ಆದರೂ ನಾವು ಸುಮ್ಮನಿದ್ದೇವೆ. ಇಡೀ ವಿದ್ಯಾಕ್ಷೇತ್ರ ಪೋಲೀಸರ ದೌರ್ಜನ್ಯದ ವಿರುದ್ಧ ಹೋರಾಡುವ ಅಗತ್ಯ ಇಂದಿದೆ. ಇದರ ಜೊತೆಗೆ ಒಟ್ಟು ಸಮಾಜದ ವಿಮೋಚನೆಯ ಚಳುವಳಿಗೆ ಸಂಘಟಿತರಾಗಬೇಕು. ಆದ್ದರಿಂದ ಬಲಿಯುತವಾದ ತತ್ವಬದ್ಧವಾದ ವಿದ್ಯಾರ್ಥಿ ಸಂಘಟನೆಗಳನ್ನು ಕಟ್ಟುವುದು ಎಲ್ಲ ಪ್ರಗತಿಪರರ ಮತ್ತು ವಿಚಾರವಂತ ವಿದ್ಯಾರ್ಥಿಗಳ ಕರ್ತವ್ಯವಾಗಿದೆ.

—ಎಲ್. ಎಚ್.

<u>ಸಾಧಾರ ಸ್ವೀಕಾರ</u>

ಧರೆಗೆ ದೊಡ್ಡವರ ಕಾವ್ಯ

ಲೇಖಕರು : ತಮ್ಮಪ ಮೂರ್ತಿ

ಬೆಲೆ ರೂ. 12 ಪುಟ-158

ಡಿಯುಸೆಸ್ ಮುಂಚೂಣಿಗೆ ದಲಿತ ವಿದ್ಯಾರ್ಥಿ

ವರದಿ : ಎಚ್. ಪಿ. ಜನಕರಾಜ್

ಕಾಂಗ್ರೆಸ್ಸಿನ ಠಕ್ಕ ರಾಜಕೀಯದ ಗುಂಗಿನ ಪೊರೆಕಳಚಿ ಈಗಷ್ಟೇ ಪ್ರಗತಿಪರ ವಿಚಾರ ಧಾರೆಯತ್ತ ಬೆಂಗಳೂರಿನ ದಲಿತ ವಿದ್ಯಾರ್ಥಿ ಸಮುದಾಯ ಕಾಲಿರಿಸಿದೆ. ಇಂದಿರಾಗಾಂಧಿ. ದೇವರಾಜಅರಸು. ಬಸವಲಿಂಗಪ್ಪ, ಬಂಗಾರಪ್ಪ ಮತ್ತು ಗುಂಡೂರಾವ್‌ರಂತಹ ಖದೀಮ ರಾಜಕಾರಣಿಗಳ ಭಾಷಣಗಳಿಗೆ ಜೈಕಾರ ಹಾಕುವ ಪ್ರವೃತ್ತಿಗೆ ಆ ವಿದ್ಯಾರ್ಥಿಗಳೀಗ ಗುಡ್‌ಬೈ ಹೇಳತೊಡಗಿದ್ದಾರೆ.

ತಮ್ಮ ಮೇಲೂ, ತಮ್ಮ ಜನಾಂಗದ ಮೇಲೂ ನಡೆಯುತ್ತಿರುವ ನಾನಾ ಬಗೆಯ ಶೋಷಣೆಯನ್ನು ಗರುತಿಸಿಕೊಂಡು ತಮ್ಮೆಲ್ಲ ನೋವಿಗೆ ಮಾರ್ದನಿಸುವ ದಲಿತ ಸಂಘರ್ಷ ಸಮಿತಿಯ ಹೋರಾಟದ ಹಾದಿಯಲ್ಲಿ ಹೋರಾಡಲು ಅವರೀಗ ಅನುವಾಗಿದ್ದಾರೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಬೆಂಗಳೂರು ಜಿಲ್ಲಾ ಶಾಖೆಯು ಮಾರ್ಚ್ 1ರಂದು ಬೆಂಗಳೂರಿನಲ್ಲಿ ನಡೆಸಿದ ದಲಿತ ವಿದ್ಯಾರ್ಥಿ ಸಮ್ಮೇಳನದಲ್ಲಿ ಕಂಡುಬಂದ ಬೆಳವಣಿಗೆ ಇದು.

ವಿದ್ಯಾರ್ಥಿ ಸಮ್ಮೇಳನವನ್ನು ಉದ್ಘಾಟಿಸಿದ ವಿಚಾರವಾದಿ ಡಾ॥ ಎಚ್. ನರಸಿಂಹಯ್ಯ ಅವರು ಕುಂಭಮೇಳ, ಅಯ್ಯಪ್ಪನ ಉತ್ಸವ, ಮಹಾಮಸ್ತಕಾಭಿಷೇಕದಂತಹ ಧಾರ್ಮಿಕ ಆಚರಣೆಗಳು ಜನರನ್ನು ಮತ್ತಷ್ಟು ಮೌಢ್ಯಕ್ಕೆ ನೂಕುವುದರಿಂದ ಮತ್ತು ಕ್ರಿಕೆಟ್ ಕಾಮೆಂಟರಿ ಕೇಳುವುದಕ್ಕಾಗಿ ವಿದ್ಯಾರ್ಥಿಗಳು ದಿನಗಟ್ಟಲೇ ಕಾಲಕಳೆಯುತ್ತಿರುವಾಗ ಈ ದೇಶದಲ್ಲಿ ಕ್ರಾಂತಿ ಸಾಧ್ಯವೆ? ಎಂದು ಪ್ರಶ್ನಿಸಿ, ದಲಿತ ವಿದ್ಯಾರ್ಥಿಗಳಿಗೆ ವಿಶೇಷವಾದ ಸಾಮಾಜಿಕ ಜವಾಬ್ದಾರಿ ಇರುವುದರಿಂದ ವ್ಯಾಸಂಗದ ಜತೆಗೆ ಹೋರಾಟದ ಮನೋಭಾವ ಬೆಳಸಿಕೊಳ್ಳಬೇಕೆಂದು ಕರೆಕೊಟ್ಟರು.

'ದಲಿತ ವಿದ್ಯಾರ್ಥಿಗಳು ಮತ್ತು ರಾಜಕೀಯ ಪಕ್ಷಗಳು' ವಿಷಯ ಕುರಿತು ಮಾತನಾಡಿದ ಡಾ॥ ಜಿ. ರಾಮಕೃಷ್ಣ ಅವರು ದಲಿತ ವಿದ್ಯಾರ್ಥಿಗಳು ಇಂದು ಹೆಚ್ಚುಹೆಚ್ಚಾಗಿ ಎಡಪಂಥೀಯ ಸಿದ್ಧಾಂತಗಳನ್ನು ಅಧ್ಯಯನಮಾಡಿ ಇಂಡಿಯಾದಲ್ಲಿನ ಎಡ ಪಕ್ಷಗಳಿಗೆ ಹೊಸ ತಿರುವುಕೊಡುವ ದಿಕ್ಕಿನಲ್ಲಿ ಯೋಚಿಸುವುದು ಅಗತ್ಯ ಎಂದರು.

ದಲಿತ ವಿದ್ಯಾರ್ಥಿಗಳ ಇಂದಿನ ಸ್ಥಿತಿಗತಿಗಳನ್ನು ಕುರಿತು ಮಾತನಾಡಿದ ಪ್ರೊ॥ ಮುಮ್ತಾಜ್ ಆಲಿ ಖಾನ್ ಅವರು ದಲಿತ ಎದ್ಯಾರ್ಥಿಗಳು ಎಲ್ಲ ಅನ್ಯಾಯಗಳ ವಿರುದ್ಧ ಸಿಡಿದೇಳುವ ಪ್ರವೃತ್ತಿಯನ್ನು ಬೆಳಸಿಕೊಳ್ಳಬೇಕೆಂದರು.

ಮೊದಲ ಅಧಿವೇಶನದ ಅಧ್ಯಕ್ಷತೆವಹಿಸಿದ್ದ ದಲಿತ ಸಾಹಿತಿ ಕೆ. ನಾರಾಯಣಸ್ವಾಮಿ ಅವರು ಶೋಷಿತರ ವಿಮೋಚನಾ ಹೋರಾಟದ ಮುಂಚೂಣಿಯಲ್ಲಿರುವ ದಲಿತ ಸಂಘರ್ಷ ಸಮಿತಿಯಲ್ಲಿ ವಿದ್ಯಾರ್ಥಿಗಳು ಸಕ್ರಿಯ ಪಾತ್ರವಹಿಸಲು ಮುಂದಾಗಬೇಕೆಂದು ಹೇಳಿದರು.

ದಲಿತ ಬರಹಗಾರ ದೇವನೂರ ಮಹಾದೇವ ಅವರ ಅಧ್ಯಕ್ಷತೆಯಲ್ಲಿ ನಡೆದ ಎರಡನೇ ಅಧಿವೇಶನದಲ್ಲಿ ದೇವಯ್ಯ ಹರವೆ, ಇಂದೂಧರ ಹೊನ್ನಾಪುರ, ಸಿದ್ಧಲಿಂಗಯ್ಯ ಮಾತನಾಡಿದರು. ಕೆ. ರಾಮಯ್ಯ ಸಮ್ಮೇಳನದ ಮುಕ್ತಾಯ ಭಾಷಣಮಾಡಿದರು. ದಲಿತ ಕಲಾಮಂಡಲಿಯ ಹಾಡುಗಾರರು ದಲಿತ ಸಂಘರ್ಷ ಸಮಿತಿಯ ಹೋರಾಟದ ಹಾಡುಗಳನ್ನು ಹಾಡಿದರು.

ದಲಿತರಿಗೆ ಮೀಸಲಾತಿ ಉಪ

● ಎಲ್. ಹನುಮಂತಯ್ಯ

ಭಾರತದ ಸಂವಿಧಾನದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ತುಳಿತಕ್ಕೊಳಗಾದ ಜನಗಳಿಗೆ ಸರ್ಕಾರಿ ಹುದ್ದೆಗಳಲ್ಲಿ ಮತ್ತು ಶೈಕ್ಷಣಿಕ ರಂಗದಲ್ಲಿ ಶೇ. 18ರಷ್ಟು ಮೀಸಲಾತಿ ನೀಡಲಾಗಿದೆ. ಅಂದಿನಿಂದ ಇಂದಿನವರೆಗೆ ಸೋಲಿನಿಂದ ಕಲಿತು ನರಳಾಡುತ್ತಿದ್ದ ಕೆಲವು ಯುವಕರು ಗುಮಾಸ್ತರಾಗಿದ್ದಾರೆ. ಮತ್ತೂ ಸ್ವಲ್ಪ ಜನ ಸೇವಕರಾಗಿ ಅಲ್ಲಿಯೂ ನಿಷ್ಠೆಯಿಂದ ಸೇವೆಮಾಡುತ್ತಿದ್ದಾರೆ. ಇದರಿಂದ ಈ ದೇಶವನ್ನು ಆಳುವ ಅಧಿಕಾರವೇನು ಈ ಜನರ ಕೈಸೇರಲಿಲ್ಲ. ಇವರ ಬಡತನ ಪರಿಹಾರವಾಗಲಿಲ್ಲ. ಜೀವನ ಸುಗಮವಾಗಲಿಲ್ಲ. ಕಣ್ಣೀರು ಕಡೆಯಾಗಲಿಲ್ಲ.

ಮೀಸಲಾತಿಯನ್ನು ಉದಾರವಾಗಿ ನೀಡುವುದು ಬಹುಶಃ ಮನುಷ್ಯರನ್ನು ಪ್ರಾಣಿಗಳನ್ನಾಗಿಮಾಡಿ ಅವರ ತಲೆಯ ಮೇಲೆ ಮಲಹೊರಿಸಿದ ಕೆಲಸಗಳಲ್ಲಿ, ಪೌರಕಾರ್ಮಿಕರಾಗಿ ನಗರ ಪಟ್ಟಣಗಳಲ್ಲಿ ದುಡಿಯುವ ಶ್ರಮ ಜನಗಳಾಗಿ. ಇಂಥ ದುಡಿಯುವ ಜನಗಳ ಜೀವನಮಟ್ಟ ಕೂಡ ಸಾಮಾನ್ಯ ಜನಗಳ ಜೊತೆ ಇರಲೂ ಅಸಾಧ್ಯವಾಗಿದೆ. ಇಷ್ಟಾದರೂ ಮೀಸಲಾತಿಯಿಂದ ಇಡೀ ದೇಶವೇ ಹಾಳಾಗುತ್ತದೆ ಎಂದು ದೇಶದ ತುಂಬಾ ದಮನಕಾರಿ ಧೋರಣೆಯತ್ತ ಜನ ಹಾರಾಡುವುದನ್ನು ನಾವು ಕಾಣುತ್ತಿದ್ದೇವೆ. ಇತ್ತಿಚಿನ ಭಾರತೀಯ ಜನತಾಪಕ್ಷದ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಜೇತ್ಮಲಾನಿ ಕೂಡ ಮೀಸಲಾತಿಯಿಂದ ಭಾರತದಲ್ಲಿ ಜಾತೀಯತೆ ಹೆಚ್ಚುತ್ತಿದೆ. ದೇಶದಲ್ಲಿ ಪ್ರಗತಿ ಹಿಂದೆ ಬೀಳುತ್ತಿದೆ ಎಂಬ ಅಭಿಪ್ರಾಯಪಟ್ಟಿದ್ದಾರೆ. ಜಾತೀಯತೆಯ ಸಮರ್ಥಕರು ಈ ಮಾತು ಹೇಳುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಮೀಸಲಾತಿಯ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವೆಂದು ಭಾವಿಸಿದ್ದೇನೆ.

ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ಭಾರತ ಸರ್ಕಾರ ಸ್ವಾತಂತ್ರ್ಯದ ನಂತರ ಸಮಾಜದ ಅತೀ ಕೆಳಸ್ತರಲ್ಲಿದ್ದವರನ್ನು ಮೇಲಕ್ಕೆತ್ತುವ ಸಣ್ಣ ಪ್ರಯತ್ನವೊಂದನ್ನುಮಾಡಿದೆ. ಇದು ಅವರ ಸಂಪೂರ್ಣ ಪ್ರಗತಿಯಂತೂ ಅಲ್ಲವೆಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಸಂವಿಧಾನ ಕರ್ತೃಗಳಾದ ಡಾ॥ ಅಂಬೇಡ್ಕರ್ ಅಸ್ಪೃಶ್ಯರಾದ ಕಾರಣದಿಂದೇನೋ ಮೀಸಲಾತಿಬೇಕೆಂದು ಸಂವಿಧಾನದಲ್ಲಿ ಉಲ್ಲೇಖಿಸಿದರು, ಅವರ ಸಂಪೂರ್ಣ ಮುಂದಾಲೋಚನೆಯ ಫಲವಾಗಿ ಮೀಸಲಾತಿ ಕೇವಲ ಹತ್ತು ವರ್ಷಗಳು ಪ್ರಯೋಗವಾಗಲಿ. ಅನಂತರದಲ್ಲಿ ಇದರ ಪ್ರಯೋಜನ ಪಡೆಯುವ ಜನರೇ ಅದರ ಅವಶ್ಯಕತೆಯನ್ನು ತೀರ್ಮಾನಿಸುತ್ತಾರೆ ಎಂದು ಭವಿಷ್ಯ ನುಡಿದಿದ್ದರು. ಅವರು ಅಭಿಪ್ರಾಯಪಟ್ಟಂತೆಯೇ ನಮ್ಮ ಭಾರತದ ಬಂಡವಾಳಶಾಹಿ ಮತ್ತು ಜಮೀನ್ದಾರಿ ಸರ್ಕಾರ ಮತ್ತು ಅದರ ಪೋಷಕರು ಮೀಸಲಾತಿಯನ್ನು ತಮ್ಮ ಸೂಳೆಯನ್ನಾಗಿ ಮಾಡಿಕೊಂಡಿದೆ. ಅದು ನಡೆಸುವ ಚುನಾವಣೆಗಳಲ್ಲಿ ನೀಡುವ ಹೆಂಡ ಹಣದ ಜೊತೆಯಲ್ಲೇ ಮೀಸಲಾತಿಯನ್ನು ಸೇರಿಸಿ ಅದನ್ನು ಮುಂದುವರಿಸುವ ಮೂಲಕ ಪ್ರಗತಿಗೆ ಕಾರಣರಾಗಿದ್ದೇವೆಂಬ ಬಣ್ಣವನ್ನು ಬಳಿಯುತ್ತಿದ್ದಾರೆ. ದಿನಬೆಳಿಗ್ಗೆಯಾದರೆ ಮೀಸಲಾತಿ ಜನರ ಹೆಸರನ್ನು ಜಪಿಸಿ ಸಮಾಜದ ಉಳಿದ ಬಡವರಿಂದ ಮೀಸಲಾತಿ ಬಡವರನ್ನು ದೂರ ಇರಿಸಿದ್ದಾರೆ. ಮೀಸಲಾತಿಯಿಂದ ಇವರೆಂದೂ ಒಂದುಗೂಡದಂತೆ ಎಚ್ಚರವಹಿಸಿದ್ದಾರೆ. ಈ ಜನರ ಸಂಘಟನೆ ಸರ್ಕಾರದ ಸಂಖಿದ ಮಂಚಮುರಿಯುವ ಅಸ್ತ್ರವಾಗುತ್ತದೆಯೆಂಬ ಎಚ್ಚರ ಈ ವರ್ಗಕ್ಕೆ ಸದಾ ಇದ್ದೇ ಇದೆ. ಇಷ್ಟಾದರೂ ದೇಶದ ಪ್ರಗತಿ ಮೀಸಲಾತಿಯಿಂದ ಹಿಂದೆ ಬೀಳುತ್ತಿದೆ ಮತ್ತು ಒಟ್ಟಾರೆ ದೇಶದಲ್ಲಿ ಪ್ರತಿಭಾ ಪಲಾಯನವಾಗುತ್ತಿದೆಯೆಂಬ ಬಾಲಿಶ ವಾದಗಳು ಸಾಕಷ್ಟು ಕೇಳಿಬರುತ್ತವೆ.

ಪ್ರತಿಭಾ ಪಲಾಯನ

ಭಾರತೀಯ ಸಮಾಜ ಬಹಳ ಕಾಲದಿಂದ ಯಾವುದೇ ಪ್ರತಿಭಾವಂತನಿಗೆ ಅವಕಾಶಕೊಟ್ಟು, ಅದನ್ನು ಸಮಾಜದ ಏಳ್ಗೆಗೆ ಉಪಯೋಗಿಸಿಕೊಂಡಿಲ್ಲ. ಈ ಮೋಸ ಜಾತೀಯ ಆಧಾರದ ಮೇಲಾಗಿರುವುದು. ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಾಗಿರಲೂ ಸಾಧ್ಯವಿದೆ. ಉದಾಹರಣೆಗೆ ನಾವು ಬೀದಿಯಲ್ಲಿ ಹಾಡುವ ಕುರುಡರ ವಾದ್ಯಗೋಷ್ಠಿಯನ್ನು ಕೇಳಿದ್ದೇವೆ. ಅವರ ಇಂಪಾದ ಗಾನಕ್ಕೆ ತಲೆದೂಗದವರಿಲ್ಲ. ಆದರೂ ಒಂದು ಕ್ಷಣ ಅವರ ಬದುಕನ್ನು ಊಹಿಸಿದಾಗ ಅವರಲ್ಲಿನ ಪ್ರತಿಭೆ ಏನಾಗುತ್ತಿರಬಹುದು ಎಂಬ ಕಡೆಗೊಯ್ಯುತ್ತದೆ. ಉತ್ತಮವಾದ ಕಲಾವಿದನೊಬ್ಬನ ಬದುಕು ಈ ದೇಶದಲ್ಲಿ ಅವನ ಜೀವನವನ್ನು ಸಾಗಿಸಲಾರದಷ್ಟು ಕೀಳು ಮಟ್ಟಕ್ಕೆ ಕೊಂಡೊಯ್ದಿದೆ. ನಮ್ಮ ಸಮಾಜ ಯಾವತ್ತೂ ಕಲಾವಿದನೊಬ್ಬನನ್ನು ಗೌರವಿಸಿಲ್ಲ. ಅವರ ಪ್ರತಿಭೆಯನ್ನು ಸಮಾಜವು ಉಪಯೋಗಿಸಿಕೊಂಡಿಲ್ಲ. ಈ ರೀತಿ ಪ್ರತಿಭಾ ಪಲಾಯನ ಸಾವಿರಾರು ವರ್ಷಗಳಿಂದ ಸಾರ್ವಜನಿಕವಾಗಿ ನಡೆಯುತ್ತಿರುವುದಕ್ಕೆ, ನಡೆದಿರುವುದಕ್ಕೆ ಮೀಸಲಾತಿಯಂಥ ತೇಪೆ ಕೆಲಸ ಎಷ್ಟರಮಟ್ಟಿಗೆ ಅಡಿಯಾದೀತು ?

ಕೆಳ ಜಾತಿಯವರು ಪ್ರತಿಭಾವಂತರಲ್ಲ. ಎಂಬ ಮೊಂಡುವಾದ ಕೆಲವು ದಡ್ಡರ ತಲೆಯಲ್ಲಿದೆ. ಇವರ ವಾದಕ್ಕೆ ವ್ಯತಿರಿಕ್ತವಾದ ವ್ಯಕ್ತಿತ್ವಗಳನ್ನು ನಾವಾಗಲೇ ನೋಡಿರುವುದರಿಂದ ವಿಶ್ವವಿಖ್ಯಾತರಾದವರಲ್ಲಿ ಅಸ್ಪೃಶ್ಯರಿದ್ದರು ಎಂದ ಮೇಲೆ ಮೇಲಿನ ವಾದಕ್ಕೆ ಹುರುಳಿಲ್ಲವೆಂದಾಯಿತು.

ಉದ್ಯೋಗದಲ್ಲಿ ಮೀಸಲಾತಿಯೆಂದು ನಾಟಕವಾಡುತ್ತಿರುವ ಈ ಸರ್ಕಾರ ಕೆಲವು ಮುಖ್ಯ ಉದ್ಯೋಗಗಳನ್ನು ಈ ದೇಶದ ಹಣವಂತರಿಗೆ ಮಾರಾಟ ಮಾಡುತ್ತಿದೆ. ಹಣವಂತರ ಮಾರುಕಟ್ಟೆಯಲ್ಲಿ ಸ್ಪರ್ಧಿಸುವ ಶಕ್ತಿ ದಲಿತರಲ್ಲಿರುವ ಆರ್ಥಿಕವಾಗಿ ಮುಂದುವರಿದವರು ಮಾತ್ರ ಉಪಯೋಗಿಸಿಕೊಳ್ಳಲು ಸಾಧ್ಯ. ಸಮಾಜದ ತೀರ ಕೆಳಸ್ತರದಲ್ಲಿರುವವನು ಯಾವಾಗಲೂ ಮೇಲೇಳಲು ಸಾಧ್ಯವೇ ಇಲ್ಲ. ದಿನನಿತ್ಯದ ಬದುಕಿನಲ್ಲಿ ಎರಡು ಹೊತ್ತು ಊಟಮಾಡಲು ಸಾಧ್ಯವಿಲ್ಲದೆ ಇರುವ ಸ್ಥಿತಿಯಲ್ಲಿ ಹತ್ತು-ಇಪ್ಪತ್ತು ಸಾವಿರ ತೆತ್ತು ಕೆಲಸಗಿಟ್ಟಿಸುವ ಸಾಧ್ಯತೆಯಲ್ಲಿದೆ ? ಇಂಥ ವ್ಯವಸ್ಥೆಯಲ್ಲಿ ಮೀಸಲಾತಿ ಕೂಡ ಹೇಗೆ ಆಳುವವರ್ಗಗಳಿಗೆ ಪೂರಕವಾಗಿ ಕೆಲಸಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಪ್ರಾಮಾಣಿಕವಾಗಿ ಯಾವುದೇ ಇಲಾಖೆಯಲ್ಲೂ ಕೂಡ ಸರ್ಕಾರದ ಕಾನೂನು ಜಾರಿಯಾಗಿಲ್ಲ. ಅರ್ಹತೆವುಳ್ಳ ಅಭ್ಯರ್ಥಿ ದೊರೆಯಲಿಲ್ಲ ಎಂಬ ಕ್ಷುಲ್ಲಕ ಕಾರಣಗಳನ್ನು ನೀಡಿ ವಂಚನೆ ಮಾಡುತ್ತಿದ್ದಾರೆ. ಕಾರಕೂನನಾಗಿ ಕೆಲಸಮಾಡಲು ಸಮರ್ಪಕವಾಗಿ ತಯಾರುಮಾಡುತ್ತಿರುವ ಈ ದೇಶದ ವಿದ್ಯಾಭ್ಯಾಸ ಪಡೆದು ಪದವೀಧರರಾದರು ಇಂದು ಬೀದಿಯಲ್ಲಿದ್ದಾರೆ. ಸರ್ಕಾರಕೂಡ

ಕೇಂದ್
ತುಂಬ
ಪರಿಸ್ಥಿ
ವಹಿಸಿ
ರುವ
ತ್ತಿರು
ತಿಳಿಯ
ಗಳಿಂದ
ಯುತ್ತಿ
ಪ್ರತಿಭ
ಕುಂಠಿತ
ಮೊಂದ
ರಾರು
ಕಾಣದ

ಯೋಗ - ಒಂದು ವಿಶ್ಲೇಷಣೆ

ಕೇಂದ್ರವಾಗಲೀ, ರಾಜ್ಯವಾಗಲೀ ಮೀಸಲಾತಿ ತುಂಬಿಸಿ ಅವರಿಗೆ ನ್ಯಾಯ ಒದಗಿಸಿ ಅವರ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಕಾಳಜಿ ವಹಿಸಿಲ್ಲ. ಹೀಗಿದ್ದಾಗ್ಯೂ ಕೂಡ ಪುಸ್ತಕದಲ್ಲಿರುವ ಮೀಸಲಾತಿಯ ಬಗ್ಗೆ ಕೂಡ ಕೆಂಡ ಕಾರುತ್ತಿರುವ ಜನಗಳಿಗೆ ಕಾರಣಗಳಾದರೂ ಏನೋ ತಿಳಿಯುತ್ತಿಲ್ಲ. ಕೇವಲ ಮೂವತ್ತು ವರುಷಗಳಿಂದ ಮಾತ್ರ ಮೀಸಲಾತಿಯ ಸೌಲಭ್ಯ ದೊರೆಯುತ್ತಿದೆ. ಈ ಮೂವತ್ತು ವರುಷಗಳಲ್ಲಿ ಪ್ರತಿಭಾ ಪಲಾಯನವಾಗುತ್ತಿದೆ, ದೇಶದ ಪ್ರಗತಿ ಕುಂಠಿತಗೊಂಡಿದೆ, ಎಂದು ವಾದಿಸುವವರ ಮೊಂಡುವಾದವನ್ನು ಒಪ್ಪುವುದಾದರೆ, ಸಾವಿರಾರು ವರ್ಷಗಳಿಂದ ವಿದ್ಯೆಯ ಗಂಧವನ್ನೂ ಕಾಣದೆ ಅಂಧಕಾರದಲ್ಲಿ ತಮ್ಮ ಬದುಕನ್ನು ಸಾಗಿಸುತ್ತಾ ಬಂದಿರುವ ಬಹುಸಂಖ್ಯಾತ ಜನಗಳ ಪ್ರತಿಭೆಗೆ ಯಾವುದೇ ರೀತಿಯ ಅವಕಾಶ ಕೂಡ ಇರಲಿಲ್ಲ. ಆಗ ಪ್ರತಿಭಾ ಪಲಾಯನವಾಗುತ್ತಿರಲಿಲ್ಲವೆ ? ಸಾವಿರಾರು ವರ್ಷದ ಈ ನಷ್ಟಕ್ಕೊಳಗಾಗಿರುವ ಈ ಜನಗಳಿಗೆ ನೀವು ಒದಗಿಸುವ ಪರ್ಯಾಯ ಮಾರ್ಗವಾದರೂ ಯಾವುದು ? ಮಾನವನ ಮಾನಸಿಕ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳದೆ ದೇಶಕ್ಕೆ ಹಾನಿಯುಂಟುಮಾಡಿರುವ ವರ್ಗ ಇದಕ್ಕೇನು ಉತ್ತರ ಕೊಟ್ಟೀತು ?

ನಾಟಕ

ವಾಸ್ತವ ಪರಿಸ್ಥಿತಿ ಹೀಗಿರುವಾಗ ಸದ್ಯದ ರಾಜಕೀಯ ಚೌಕಟ್ಟಿನಲ್ಲಿ ಮೀಸಲಾತಿ ಅನಿವಾರ್ಯವಾಗಿದೆ. ಇದನ್ನು ರಾಜಕೀಯ ನಾಟಕಕ್ಕೆ ಉಪಯೋಗಿಸಿಕೊಂಡು ಬಹಳ ದಿನಗಳಿಂದ ಶೋಷಿಸಲ್ಪಟ್ಟ ಜನಗಳನ್ನು ಮತ್ತಷ್ಟು ಶೋಷಿಸುವುದೂ ಸಲ್ಲದು. ಮೀಸಲಾತಿಯಿಂದ ಈ ದೇಶದ ಆರ್ಥಿಕ ಸಾಮಾಜಿಕವಾಗಿ ಶೋಷಣೆಗೊಳಪಟ್ಟ ಜನರ ವಿಮೋಚನೆಯಾಗುತ್ತದೆಯೆಂದು ನಂಬುವುದು ಮೂರ್ಖತನದ ಮಾತು. ಎಲ್ಲಿಯವರೆಗೆ ಈ ದೇಶದ ವಿಕೃತ ವ್ಯವಸ್ಥೆ ಸಂಪೂರ್ಣ ಬದಲಾವಣೆ ಹೊಂದುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸಂಧಾರಣೆ ಕೂಡ ಪುಸ್ತಕದ ಮಾತು. ಅಂಥ ಬಿಡುಗಡೆ ಸಂಘಟನೆ ಮತ್ತು ಹೋರಾಟಗಳಿಂದ ಮಾತ್ರ ಸಾಧ್ಯ ಎಂಬುದನ್ನು ಆ ವಂಗಡದ ಜನಗಳು ಮನಗಾಣುವ ಅಗತ್ಯ ಇಂದಿದೆ.

—ಸೌಜನ್ಯ : ಸಮುದಾಯ ವಾರ್ತಾ ಪತ್ರ

ಯಲ್ಲವ್ವನ ಬಗುತಿ

ಕಾಡುಗಿರಿಯ ಮ್ಯಾಲೊಂದು ಹೊಳದಂಗ ದೀಪ
ಊರ ಬಾಯಲ್ಲಿ ಹೊಳದೈತ್ತೆ ನಿನ್ನ ರೂಪ
ಮುತ್ತೈದೆ ಹಾದಿಯ ಹಂಬಲಿಸೊ ನನತಂಗಿ
ಇಂಗ್ಯಾಕ ಆತೊ ನಿನ ಬಾಳು.

ಸುತ್ತೂರ ಬಳಗುಂಟು ನೆರೆಹೊರೆಯ ಸೆಲಿನಂಟು
ಹತ್ತೂರ ಹೈದರು ಸುತ್ತಾಡಿ ಬಂದಾರು
ಎತ್ತನಾ ನೋಡಿದರೂ ಮುತ್ತೈದೆ ಆಗಲಿಲ್ಲ
ಹೆತ್ತವ್ವ ನನ ಮದುವೆ ಮಾಡಲಿಲ್ಲ ಅಣ್ಣಯ್ಯ

ಹೆತ್ತವರು ಹೊತ್ತವರು ಯಾಕ ಇದ್ದಾರು
ಸುತ್ತೂರ ನಂಟೊಲ್ಲದೆ ಮತ್ತೇನ ಮಾಡ್ಯಾರು
ಮುತ್ತೈದೆ ಬಾಳ ಕೊಡದೆ ನನತಂಗಿ
ಹೊತ್ತೈತ್ತೆ ನನಕೂಟ ಹೇಳವ್ವ ನಿನ ಕತೆಯ.

ಊರ ಉತ್ತಮರು ಕೂಡ್ಯಾರು ಅಣ್ಣಯ್ಯ
ಉಳ್ಳಂತ ಮಾನ್ಯರು ಗುಡಿಮುಂದೆ ಕುಂತಾರು
ಮಾರವ್ವನ ಬ್ಯಾನಿ ಊರಾಗ ಎದ್ದೈತ್ತೆ
ಯಲ್ಲವ್ವನ ಕಡುಕ್ವಾಪ ಊರ ನುಂಗುತ್ತೈತ್ತೆ

ಯಲ್ಲವ್ವನ ಕ್ವಾಪಕೆ ನೀನೇನ ಮಾಡಬೇಕು
ಊರ ಉತ್ತಮರು ನಿನ್ಯಾಕ ಕರೀಬೇಕು
ಉಳ್ಳವರು ಕುಂತು ನಿನಗೇನ ಹೇಳಬೇಕು
ಒಗಟ್ಟಿದ್ದಂಗೈಯ್ತಲ್ಲೊ ಒಡದೇಳ ತಂಗ್ಯವ್ವ.

ನನಬಾಳ ಒಗಟ ನಾ ಏನಂತ ಒಡೆಯಲಿ
ಒಡದೇಳಿ ಬಾಳಲ್ಲಿ ಏನೇನಾ ಪಡೆಯಲಿ
ಯಲ್ಲವ್ವ ಮಾತಾಯಿ ಕ್ವಾಪಗಾರ ಬೂತಾಯಿ
ಊರೊಟ್ಟ ಜೀವ ತಗೆದಾಳು ಅಣ್ಣಯ್ಯ.

ಜೀವಾರ ತಗೆಯಾಲಿ ಬೇವಾರ ಅಗಿಯಾಲಿ
ಊರ ಉಳ್ಳವರು ನಿನ್ಯಾಕ ಕರೆದಾರು
ಉತ್ತಮರು ಕೂಟಕೆ ನಿನ್ಯಾಕ ಎಳೆದಾರು
ಚಂದಾಗಿ ನನ್ನೊಂದಿಗೆ ಹೇಳ ತಂಗ್ಯವ್ವ.

ಹೊಲಗೇರಿ ಚಲುವೇರು ಮಾದಗೇರಿ ಮದನೇರು
ಊರ ತಾಯಿ ಯಲ್ಲವ್ವನ ಬಗುತಾರೆಂದು
ಯಲ್ಲವ್ವನ ಜಾತರೇಯ ಮಾಡೀರಿ ನೀವೆಂದು
ಕೈತುಂಬಾ ರೊಕ್ಕವ ಸುರಿದಾರು ಅಣ್ಣಯ್ಯ.

ಉತ್ತಮರು ಬಗುತಿಯ ಮಾಡಾಲಿ ತಂಗ್ಯವ್ವ
ಉಳ್ಳವರು ಜಾತರೇಯ ಮಾಡಾಲಿ ಕಂಡ್ಯವ್ವ
ಮೂಗುತಿ ಕಿತ್ತೊಗೆದು ನಿನ್ಯಾಕ ದೂಡ್ಯಾರು
ಕಾಲುಂಗುರ ನಿನಗ್ಯಾಕ ತೊಡಸ್ಯಾರು ತಂಗ್ಯವ್ವ.

ಕಾಲುಂಗುರ ನನಗೈತ್ತೆ ಕೈಯುಂಗುರ ಸೆರಿಯೈತ್ತೆ
ತಾಲಿ ಬಿಗಿದಾತ ನನಗಿಲ್ಲೊ ಅಣ್ಣಯ್ಯ
ಕೈಹಿಡಿದ ಗಂಡ ನಿನಗಿಲ್ಲದ ಮ್ಯಾಲೆ
ನೀ ನಡೆದ ಹಾದ್ಯೆಂತ ಹಾದಿ ನನತಂಗಿ.

ಯಲ್ಲವ್ವನ ಬಗುತಿಯ
ಮಾಡಬೇಕು ಅಣ್ಣಯ್ಯ
ಊರೀನ ಬ್ಯಾನೀಯ
ನೀಗಬೇಕು ಅಣ್ಣಯ್ಯ
ಒಗಟ ನಾ ಒಡಿತೀನಿ
ಕೇಳ ನೀ ಅಣ್ಣಯ್ಯ.

ಊರ ಉತ್ತಮರಿಗೆ ಸೆರಗ ನಾ ಹಾಸಬೇಕು
ಉಳ್ಳವರ ಮೈಯಾಸೆಯ ತೀರಿಸಲೂ ಬೇಕು
ನೂರು ಕಾಲದ ಜಾತರೆ ನಡೆದು ಬಂದೈತ್ತೆ
ಅದೇ ಕಾಣೊ ಯಲ್ಲವ್ವನ ಬಗುತಿ ಅಣ್ಣಯ್ಯ.

—ಮನುಜ

ಭರವಸೆ ನೀಡುವುದಲ್ಲ

ಭರವಸೆ ಮೂಡಿಸುವ ಸರ್ಕಾರ

ಶ್ರೀ ಆರ್. ಗುಂಡೂರಾವ್ ಅವರ ನೇತೃತ್ವದ ಕರ್ನಾಟಕ ಸರ್ಕಾರ ಅಧಿಕಾರ ವಹಿಸಿಕೊಂಡು ಇದೀಗ ಒಂದು ವರ್ಷ ಸಂದಿದೆ. ಅದರ ಸಮರ್ಥತೆಯನ್ನು ಅಳೆಯಲು, ಫಲಿತಾಂಶವನ್ನು ನಿರೀಕ್ಷಿಸಲು ಇದು ತೀರಾ ಅಲ್ಪ ಕಾಲ. ಆದರೂ ಈ ಅಲ್ಪಾವಧಿಯಲ್ಲೇ ಅದರ ಸಾಧನೆ ಕಣ್ಣು ಕುಕ್ಕಿಸುವಂತಹದು. ಯಾವುದೇ ಉದ್ಯಮದ ತಿರುಳು ಅದಕ್ಕಾಗಿ ನಡೆಯುವ ಪ್ರಯತ್ನದಲ್ಲಿ ಕಂಡು ಬರುವುದೇ ವಿನಃ ಅದು ನೀಡುವ ಭರವಸೆಗಳಲ್ಲಿ ಅಲ್ಲ.

ಸರ್ಕಾರದ ಮಂಜೂರಾತಿ—ಅನುಮತಿ ನೀಡುವ ವಿಷಯಗಳಲ್ಲಿ ವಿಧಾನವನ್ನು ಸರಳಗೊಳಿಸಿ ಕೆಲಸಕಾರ್ಯಗಳು ತ್ವರಿತ ಗತಿಯಿಂದ ಮುಂದೆ ಸಾಗುವಂತೆ ಮಾಡಿದ್ದು ಈ ಸರ್ಕಾರದ ಪ್ರಮುಖ ಸಾಧನೆ. ಭ್ರಷ್ಟಾಚಾರದ ರೆಕ್ಕೆಪುಕ್ಕಗಳನ್ನು ಕತ್ತರಿಸಿ ಹಾಕಿ ಅವ್ಯವಹಾರದ ಎಲ್ಲ ಮೂಲಗಳನನ್ನೂ ತನಿಖೆಗೆ ಒಳಪಡಿಸಿ ಆಡಳಿತದಲ್ಲಿ ಶುಚಿತ್ವವನ್ನು ತಂದುದು ಇನ್ನೊಂದು ಮಹತ್ ಸಾಧನೆ.

1980—ಕರ್ನಾಟಕದಲ್ಲಿ ರೈತರ ಬಗ್ಗೆ ವಿಶೇಷ ಗಮನ ಹರಿದ ವರ್ಷ—ವ್ಯವಸಾಯ ಸೂಕ್ತ ಸ್ಥಾನಮಾನ ಪಡೆದ ವರ್ಷ. ರೈತರ ಕುಂದುಕೊರತೆಗಳನ್ನು ಅಭ್ಯಸಿಸಿ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವಂತೆ ಕ್ರಮ ಸೂಚಿಸಲು ಸರ್ಕಾರ ಒಂದು ವಿಶೇಷ ಸಮಿತಿಯನ್ನು ನೇಮಿಸಿತು. ರೈತರಿಗೆ ನೇರ ಪರಿಹಾರ ನೀಡುವುದರ ಜೊತೆಗೆ ನೀರಾವರಿ ಸೌಲಭ್ಯ, ಬೀಜ—ಗೊಬ್ಬರ ಮುಂತಾದ ರೂಪದಲ್ಲಿ ಅಪ್ರತ್ಯಕ್ಷ ಪರಿಹಾರವನ್ನೂ ನೀಡಿತು.

ಸರ್ಕಾರ ನೀಡಿದ ಹೊಸ ಕೊಡುಗೆ

ನೀರಾವರಿ ತೆರಿಗೆಯಲ್ಲಿ ಇಳಿತಾಯ

ಹನ್ನೊಂದು ತಿಂಗಳ ಕಬ್ಬಿನ ಬೆಳೆಗೆ ನೀರಾವರಿ ತೆರಿಗೆಯನ್ನು ಎಕರೆಗೆ 200ರೂ. ಯಿಂದ 150ರೂ.ಗೆ ಇಳಿಸಲಾಗಿದೆ. 11-18 ತಿಂಗಳ ಬೆಳೆಗೆ ಈಗ ರೈತ ಕೊಡಬೇಕಾದುದು 300ರೂ. ಅಲ್ಲ. ಕೇವಲ 225ರೂ.

ಇತರ ಬೆಳೆಗಳಿಗೆ ಅವನು ಕೊಡಬೇಕಾದ ದರ ಮತ್ತಷ್ಟು ಕಡಿಮೆ ಭತ್ತ – ಮಲೆನಾಡಿನಲ್ಲಿ 32ರೂ. ಇತರೆಡೆ 48ರೂ. ಗೋಧಿ – 24ರೂ. ಜೋಳ – 24ರೂ. ಹತ್ತಿ – 48ರೂ.

* ಸಹಕಾರಿ ಸಂಘಗಳಿಂದ ಪಡೆದ ಸಾಲ ಮನ್ನಾ ಸೌಕರ್ಯ ಹೆಚ್ಚೆಚ್ಚು ರೈತರಿಗೆ ದೊರೆಯುವಂತೆ ನಿರ್ದೇಶನ ಮಾರ್ಪಾಡು.

* ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ದರವನ್ನು ಪ್ರತಿ ಅಶ್ವಶಕ್ತಿಗೆ 50ರೂ.ಯಂತೆ ನೀಡುವ ಸೌಲಭ್ಯವನ್ನು ಈಗ 10 ಅಶ್ವಶಕ್ತಿವರೆಗಿನ ಪಂಪ್‌ಸೆಟ್ಟುಗಳಿಗೂ ವಿಸ್ತರಿಸಲಾಗಿದೆ. ಇದುವರೆಗೆ 5 ಅಶ್ವಶಕ್ತಿ ಪಂಪುಗಳಿಗೆ ಮಾತ್ರ ಈ ರಿಯಾಯಿತಿ ಇತ್ತು.

* ಸಾಲ ಮರುಪಾವತಿ ಮನ್ನಾ ಅಥವಾ ಮುಂದೂಡಿಕೆಯಿಂದ ಸಹಕಾರ ಸಂಘಗಳಿಗೆ ಆಗುವ ತೊಂದರೆಯನ್ನು ಪರಿಹರಿಸಲು 380 ಲಕ್ಷ ರೂ.ಗಳ ನೀಡಿಕೆ. ಪ್ರತಿ ಜಿಲ್ಲಾ ಸಹಕಾರಿ ಬ್ಯಾಂಕ್ 20 ಲಕ್ಷ ರೂ.ಗಳನ್ನು ಪಡೆದು ಸಾಲಗಳನ್ನು ಮನ್ನಾ ಮಾಡಿದ ಅಥವಾ ಮರುಪಾವತಿ ಮುಂದೂಡಿದ ಸಂದರ್ಭಗಳಲ್ಲಿ ಈ ಹಣ ಬಳಸಬಹುದು.

* ಹಿಂದುಳಿದ ಪ್ರದೇಶಗಳಲ್ಲಿ ಹರಿಜನ–ಗಿರಿಜನ ವಿದ್ಯಾರ್ಥಿಗಳಿಗಾಗಿ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಬರುವ ಮಾರ್ಚ್ ಒಳಗಾಗಿ 1 ಕೋಟಿ ರೂ. ವೆಚ್ಚ.

* ರಾಜ್ಯದಲ್ಲಿರುವ 15.000 ಸ್ಟೈಪೆಂಡರಿ ಪದವೀಧರರ ವೇತನ ತಿಂಗಳಿಗೆ 150ರೂ.ಯಿಂದ 200ರೂ.ಗೆ ಏರಿಸಲಾಗುವುದು. ಪದವೀಧರರು ಸ್ವಂತ ಉದ್ಯೋಗ ಕೈಕೊಳ್ಳಲು ಬ್ಯಾಂಕ್ ಸಾಲ ಹಾಗೂ ಮೂಲಧನ ನೀಡಲಾಗುವುದು.

* ನಿರುದ್ಯೋಗಿ ಹರಿಜನ – ಗಿರಿಜನ ಯುವಕರಿಗೆ ಆಟೋ ಹಾಗೂ ಮೋಟರ್ ಡ್ರೈವಿಂಗ್ ತರಬೇತಿ ನೀಡಲು 25,000ರೂ. ಮಂಜೂರು, ತರಬೇತಿಯ ನಂತರ ಸ್ವಂತ ವಾಹನ ಕೊಳ್ಳಲು ಬ್ಯಾಂಕ್ ಅಥವಾ ಹರಿಜನ–ಗಿರಿಜನ ಕಾರ್ಪೋರೇಷನ್ ಮುಖಾಂತರ ಸಾಲದ ನೆರವು.

* ಹರಿಜನ–ಗಿರಿಜನ ವಸತಿಗಳಲ್ಲಿ ಹಾಗೂ ಬರಗಾಲ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಲು ಒಂದು ಕೋಟಿ ರೂ. ಮಂಜೂರು. ಬರುವ ಜೂನ್ ಒಳಗಾಗಿ ಈ ಕೆಲಸ ಮುಗಿಸಲು ಆದೇಶ.

* ಅಭಾವ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಗಳಿಗಾಗಿ ಸುಮಾರು 6 ಕೋಟಿ ರೂ. ಬಿಡುಗಡೆ. ರಾಜ್ಯದಲ್ಲೂ–ಬರಗಾಲ ಪರಿಹಾರಕ್ಕೆ ರೂ.ಗಳ ಸಹಾಯ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ.

* ಈ ಪ್ರದೇಶಗಳಲ್ಲಿ ಶಾಶ್ವತ ಪರಿಹಾರಕ್ಕೆ ಕ್ರಮ ಸೂಚಿಸಲು ಉನ್ನತಾಧಿಕಾರ ಸಮಿತಿ ರಚನೆ.

* ಆಸ್ಪತ್ರೆಗಳಲ್ಲಿ ಹೊರರೋಗಿಗಳ ತಪಾಸಣೆಗಾಗಿ ವಿಧಿಸುತ್ತಿದ್ದ 25 ಪೈಸೆ ಶುಲ್ಕ ರದ್ದು.

* ಜನತಾ ಮನೆಗಳಿಗೆ ನೀಡುತ್ತಿದ್ದ ಸಹಾಯಧನ 1,500 ರೂ.ಯಿಂದ 2,000 ರೂ.ಗೆ ಹೆಚ್ಚಿಸಲಾಗಿದೆ.

* ಪ್ರತಿ ಜಿಲ್ಲೆಗೂ ಒಂದು ಕ್ರೀಡಾಗಾರ ನಿರ್ಮಾಣ. ಒಳಾಂಗಣ ಕ್ರೀಡೆಗಳಿಗೂ ಅವಕಾಶವಿರುವ ಮತ್ತು ಈಜುಕೊಳವನ್ನೂ ಒಳಗೊಂಡಂತೆ ಕ್ರೀಡಾಗಾರಗಳ ವ್ಯವಸ್ಥೆ. ಪ್ರತಿ ತಾಲೂಕಿಗೊಂದು ವ್ಯಾಯಾಮ ಶಾಲೆ.

* ಕರ್ನಾಟಕದಲ್ಲಿ ತಯಾರಾದ ಕನ್ನಡ, ತುಳು, ಕೊಂಕಣಿ ಮತ್ತು ಕೊಡವ ಭಾಷಾ ಚಲಚ್ಚಿತ್ರಗಳಿಗೆ ಸಹಾಯಧನ, ಬಣ್ಣದ ಚಿತ್ರಕ್ಕೆ 1.50 ಲಕ್ಷರೂ. ಕಪ್ಪು ಬಿಳುಪು ಚಿತ್ರಕ್ಕೆ 1 ಲಕ್ಷರೂ. ಕಳೆದ ವರ್ಷ ಇದಕ್ಕಾಗಿ 60ಲಕ್ಷರೂ. ವೆಚ್ಚ ಮಾಡಲಾಗಿದೆ. ಈ ವರ್ಷ 65 ಲಕ್ಷ ರೂ. ನೀಡುವ ಗುರಿ.

ಜನತೆಯ ಅಗತ್ಯಗಳನ್ನು ಪೂರೈಸಲು ಕಂಕಣ ಬದ್ಧವಾದ ಯುವ ಸರ್ಕಾರ
ಕರ್ನಾಟಕ ಸರ್ಕಾರ

ಪ್ರಕಟಣೆ : "ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ"

ನಂ. ವಾಪ್ರಇ / ಸಿಪಿಬಿ / 80–81 / 1333

Statement about ownership and other particulars about News paper PANCHAMA, to be published in the first issue every year after the last day of February.

FROM IV

1.	Title of Newspaper	PANCHAMA
2.	Registration Number of the Newspaper	R. N. 29681/76
3.	Language/Languages in which it is published	Kannada
4.	Periodicity of its publication and the day/days/dates on which it is published	Fortnightly
5.	Retail price of the Newspaper	20 paise
6.	Publisher's Name	Sri H. Govindaiah
	Nationality	Indian
	Address	5-A, Vani Institute of Commerce. Journalist Colony BANGALORE-560 002
7.	Printer's Name	D. S. Chakrapani
	Nationality	Indian
	Address	Nutan Printing, Publishing & Training Centre 405, Sampige Road Malleswaram BANGALORE-560 003
8.	Editor's Name	Sri Ramadev Rake
	Nationality	Indian
	Address	5-A, Vani Institute of Commerce Journalist Colony, BANGALORE-560 002
9.	True and precise account of the precise where the Printing is conducted	Nutan Printing, Publishing & Training Centre 405, Sampige Road Malleswaram BANGALORE-560 003
10.	Owner's Names	1) H. Govindaiah 2) Ramadeva Rake 3) Shivaji Ganeshan 4) Shivamalla Devanur 5) Indudhara Honnapura
11.	Place of Publication	BANGALORE-560 003

I, H. GOVINDAIAH, hereby declare that the particulars given above are true to the best of my knowledge and belief.

Bangalore
5-3-81

H. GOVINDAIAH
Signature of Publisher

ಗುಜರಾತ್ ಚಳುವಳಿ

(1ನೇ ಪುಟದಿಂದ)

ಮೀಸಲಾತಿ ಇದ್ದೂ ಈ ದಲಿತ ವರ್ಗಗಳಿಗೆ ಘೋರ ಅನ್ಯಾಯ ಎಸಗಿದ್ದರೂ, ಗುಜರಾತಿನಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಪ್ರಾಬಲ್ಯ ಹೊಂದಿರುವ ಪಟೇಲರು, ನಗರದ ಬ್ರಾಹ್ಮಣರು ಮತ್ತು ಬನಿಯಾ ಪಂಗಡಗಳ ಜನ ಮೀಸಲಾತಿ ವಿರು[illegible] ಸಮರದ ಕಿಡಿ ಹೊತ್ತಿಸಿದ್ದಾರೆ.

ಅಷ್ಟೇನೂ ಬಲವಲ್ಲದ ಎರಡು ಕಮ್ಯುನಿಸ್ಟ್ ಪಕ್ಷಗಳನ್ನು ಬಿಟ್ಟು ಆಳುವ ಕಾಂಗ್ರೆ ಪಕ್ಷದ ಕೆಲವರೂ ಸೇರಿದಂತೆ ಎಲ್ಲ ವಿರೋಧ ಪಕ್ಷಗಳ ನಾಯಕರು ಮೀಸಲಾತಿ ರದ್ದತಿ ಚಳುವಳಿಯನ್ನು ನೇರವಾಗಿ ಬೆಂಬಲಿಸುತ್ತಿದ್ದಾರೆ. ಭಾರತೀಯ ಜನತಾ ಪಕ್ಷದವರಂತೂ ಈ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸುವಲ್ಲಿ ತೊಡಗಿದ್ದಾರೆ.

ಈ ಚಳುವಳಿಯು ವೈದ್ಯಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೇ ಎಲ್ಲಾ ಸರ್ಕಾರಿ ವಲಯಕ್ಕೂ ವಿಸ್ತರಿಸಲಾಗಿದೆ. ರೈಲ್ವೆ, ಎಲ್.ಐ.ಸಿ., ಟೆಲಿಗ್ರಾಫ್, ಆರ್.ಎಂ.ಎಸ್., ಪಿ.ಎಫ್., ಇ.ಎಸ್.ಐ. ಮುಂತಾದ ಸರ್ಕಾರಿ ನೌಕರರು ಈಗಾಗಲೇ ತಮ್ಮ ಕಚೇರಿಗಳ ಎದುರು ಪ್ರತಿಭಟನಾ ಪ್ರದರ್ಶನ ಮತ್ತು ರ್‍ಯಾಲಿಗಳನ್ನು ನಡೆಸಿದ್ದಾರೆ.

ತಮ್ಮ ಮೇಲಿನ ಈ ನಿರಂತರ ದಬ್ಬಾಳಿಕೆಯನ್ನು ಹತ್ತಿಕ್ಕಲು ದಲಿತರೂ ಸಾಕಷ್ಟು ಎಲ್ಲಡೆ ಪ್ರತಿಹೋರಾಟದಲ್ಲಿ ತೊಡಗಿದ್ದಾರೆ. ದಲಿತ ಪ್ಯಾಂಥರ್ ಕಾರ್ಯಕರ್ತರು ಮತ್ತು ಜವಳಿ ಗಿರಣಿ ಕಾರ್ಮಿಕರು ರಾತ್ರೋರಾತ್ರಿ ಊರೂರು ಸುತ್ತಿ ತಮ್ಮ ಜನರ ರಕ್ಷಣೆಗಾಗಿ ಶ್ರಮಿಸುತ್ತಿದ್ದಾರೆ.

ದಲಿತ ಪ್ಯಾಂಥರ್ಸ್ ಸಂಘಟನೆಯ ಮುಖಂಡ ರಮೇಶಚಂದ್ರ ಪಾರಮಾರ್ ಅವರ ಪ್ರಕಾರ ಈ ಚಳುವಳಿಯಿಂದ ದಲಿಗಿರಿಗಾಗಿರುವ ಅನುಕೂಲವೆಂದರೆ ಜಾಗೃತಿ, ಉಪಪಂಗಡಗಳ ಐಕ್ಯತೆ ಮತ್ತು ಸ್ವಜಾತಿ ಹಾಗೂ ಇತರ ರಾಜಕಾರಣಿಗಳ ಬಗ್ಗೆ ದಲಿತರಿಗಿದ್ದ ಭ್ರಮೆ ಪೂರ್ಣವಾಗಿ ನಾಶವಾಗಿದ್ದು ಹೋರಾಟದ ಬಗೆಗೆ ವಿಶ್ವಾಸ ಮೂಡಿರುವುದು.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5 ಎ-ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ, ಬೆಂಗಳೂರು-560002.